# S B College bags overall championship

## 3-day GU inter-collegiate youth fest concludes

KALABURAGI, DHNS

Sharanabasaveshwara College of Science has bagged the overall championship by securing a lead in most of the competitions during a three-day Gulbarga University Inter-collegiate Youth Festival concluded here on Monday.

Kalaburagi Regional Commissioner Zaheera Naseem distributed the trophies to the winners at a ceremony held at the Dr B R Ambedkar Hall on the campus.

The degree college of Reshmi Educational and Charitable Trust settled for the runner-up position. A total of 25 degree colleges, including government first-grade colleges, aided and private colleges coming under the Gulbarga University, participated in the youth festival.

In all, 530 students showcased their talent by taking part in various categories including group dance, folk dance, singing, mime, clay modelling, classical and western music, dance forms of various states, cartooning, debate competition, Rangoli and folk music.

Speaking at the valedictory programme, Regional Commissioner Zaheera Naseem said that she studied in the Department of Zoology at Gulbarga University. "Coming to this university again has brought back memories of the old days. Victory and defeat are natural. The reason for the defeat should be analysed. The students learnt how to build a team beyond victory and defeat. They should apply those experiences in their future life", she said.



Students perform a dance during the youth festival.



Gulbarga University Vice-Chancellor Shashikant Udikeri distributes the award to the students of Sharanabasaveshwara Science College which bagged overall championship at the three-day Gulbarga University Inter-collegiate Youth Festival concluded in Kalaburagi on Monday. DH PHOTOS

University Registrar Ramesh Londonkar said that the youth festival has become successful due to the hard work of 137 members formed under the leadership of the vice-chancellor. Over 500 students and 36 teams participated in it, he added.

Registrar (Evaluation) N G Kannur, Finance Officer Jayambika and Research Students' Association President Anand Metri were present.

### India Book of Records

The youth festival and the diverse programmes presented by the various teams have been recorded in the India Book of Records. After watching the various competitions, the officials of the India Book of Records Pavani and Meenakshi Padmanabhan, recommended that this youth festival be recorded in the 'Youth Cultural Excellence' category, said Library Science Department head Prof Suresh Jange.

### Winners

Cultural procession: Gulbarga University team (Main Campus) (1st); Government First Grade College, Sedam (2nd). Music: Reshmi Education and Charitable Trust (1st); Sharanabasaveshwara Science College (2nd). Dance: Sharanabasaveshwara Science College (1st), Government First Grade College, Sedam (2nd).

Literary department: N V Degree College, Kalaburagi (1st), Reshmi Education and Charitable Trust (2nd). Drama: Sharanabasaveshwara Science College (1st), Reshmi Education and Charitable Trust (2nd). Fine Art: Gulbarga University Team (Main Campus) (First); Reshmi Education and Charitable Trust (Second).

VK ವಿಜಯ ಕರ್ನಾಟಕ

## ಗುಲ್ಬರ್ಗ ವಿವಿ ಅಂತರ್ ಕಾಲೇಜುಗಳ ಯುವಜನೋತ್ಸವಕ್ಕೆ ತೆರೆ । ರೇಷ್ಮಿ ಕಾಲೇಜು ರನ್ನರ್ ಅಪ್ । ವಿವಿ ವ್ಯಾಪ್ತಿಯ 25ಕ್ಕೂ ಹೆಚ್ಚು ಕಾಲೇಜುಗಳ ವಿದ್ಯಾರ್ಥಿಗಳು ಭಾಗಿ

# ಎಸ್‌ಬಿ ಸೈನ್ಸ್ ಕಾಲೇಜು ವಿನ್ನರ್




ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವ ಸ್ಪರ್ಧೆಯಲ್ಲಿ ಸಮಗ್ರ ಪ್ರಶಸ್ತಿ ಪಡೆದ ಶರಣಬಸವೇಶ್ವರ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು.




ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವ ಸ್ಪರ್ಧೆಯಲ್ಲಿ ರನ್ನರ್ ಅಪ್ ಪ್ರಶಸ್ತಿ ಪಡೆದ ರೇಷ್ಮಿ ಎಜುಕೇಶನಲ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್ ಕಾಲೇಜು ವಿದ್ಯಾರ್ಥಿಗಳು.

■ **ವಿಕ ಸುದ್ದಿಲೋಕ** ಕಲಬುರಗಿ

ಇಲ್ಲಿನ ಗುಲ್ಬರ್ಗ ವಿಶ್ವವಿದ್ಯಾಲಯದ ಜ್ಞಾನಗಂಗಾ ಆವರಣದಲ್ಲಿ ಮೂರು ದಿನ ನಡೆದ ಅಂತರ್ ಮಹಾವಿದ್ಯಾಲಯ ಯುವಜನೋತ್ಸವದ ಸ್ಪರ್ಧೆಗಳು ಸೋಮವಾರ ಸಂಪನ್ನಗೊಂಡಿದ್ದು, ಶರಣಬಸವೇಶ್ವರ ವಿಜ್ಞಾನ ಕಾಲೇಜು ಸಮಗ್ರ ಪ್ರಶಸ್ತಿ ಪಡೆದರೆ, ರೇಷ್ಮಿ ಎಜುಕೇಶನಲ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್ ಕಾಲೇಜು ರನ್ನರ್ ಅಪ್‌ಗೆ ಭಾಜನವಾಯಿತು.

ಯುವಜನೋತ್ಸವದಲ್ಲಿ 25ಕ್ಕೂ ಅಧಿಕ ಮಹಾವಿದ್ಯಾಲಯಗಳ ನೂರಾರು ವಿದ್ಯಾರ್ಥಿಗಳು ತಮ್ಮ ಕಲೆ ಪ್ರದರ್ಶಿಸಿ ನೋಡುಗರಿಂದ ಮೆಚ್ಚುಗೆಯ ಚಪ್ಪಾಳೆ ಗಿಟ್ಟಿಸಿಕೊಂಡರು. ಶಾಸ್ತ್ರೀಯ ಗಾಯನ, ಲಘು ಸಂಗೀತ, ಪಾಶ್ಚಿಮಾತ್ಯ ಸ್ವರಗಾಯನ, ಪಾಶ್ಚಿಮಾತ್ಯ ಇನ್‌ಸ್ಟ್ರುಮೆಂಟಲ್ ಸೋಲೊ, ಜಾನಪದ ಸಂಗೀತ, ಕ್ಲಾಸಿಕಲ್ ಡ್ಯಾನ್ಸ್, ಸೃಜನಾತ್ಮಕ ನೃತ್ಯ ಸಂಯೋಜನೆ, ವಾಕ್ಚಾತುರ್ಯ ಸ್ಪರ್ಧೆ, ಚರ್ಚಾ ಸ್ಪರ್ಧೆ, ಏಕಾಂತ ನಾಟಕ, ಪ್ರಹಸನ, ಮಿಮಿಕ್ರಿ, ಸ್ಪಾಟ್ ಪೇಂಟಿಂಗ್, ಪೋಸ್ಟರ್ ಮೇಕಿಂಗ್, ರಂಗೋಲಿ ಹೀಗೆ ಅನೇಕ ಸ್ಪರ್ಧೆಯ ವಿಭಾಗದಲ್ಲಿ ಶರಣಬಸವೇಶ್ವರ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ವಿಜೇತರಾಗಿ ಚಾಂಪಿಯನ್ ಪಟ್ಟಪಡೆದರೆ, ರೇಷ್ಮಿ ಕಾಲೇಜು ರನ್ನರ್ ಅಪ್ ಆಗಿ ಹೊರಹೊಮ್ಮಿತು.

ಆಯಾ ಸ್ಪರ್ಧೆಯ ವಿಜೇತರನ್ನು ಘೋಷಿಸಿ ಆಹ್ವಾನಿಸುತ್ತಿದ್ದಂತೆ ಗೆಳೆಯರು, ಪ್ರೇಕ್ಷಕರು ಶಿಳ್ಳೆ, ಚಪ್ಪಾಳೆ, ಚೀರಾಟ ಜೋರ್ ಜೋರಾಗಿತ್ತು. ಹಲಗೆ, ಡೊಳ್ಳು ಬಾರಿಸುತ್ತಾ ವೇದಿಕೆಗೆ ಬಂದು ಪ್ರಶಸ್ತಿ ಸ್ವೀಕರಿಸಿದ್ದು ಕಂಡು ಬಂತು.

ಈ ವೇಳೆ ಸಮಾರೋಪ ಸಮಾರಂಭದಲ್ಲಿ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ ಮಾತನಾಡಿ, ವಿದ್ಯಾರ್ಥಿಗಳು ಓದಿನ ಜತೆಗೆ ರಾಷ್ಟ್ರ ನಿರ್ಮಾಣದ ಚಿಂತನೆ ಮಾಡುವ ಅಗತ್ಯ ಇದೆ. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದಾಗ ಸೋಲು ಗೆಲುವು ಸಾಮಾನ್ಯ. ಒಂದು ವೇಳೆ ಸೋತರೆ ಪರಾಮರ್ಶೆ ಮಾಡಬೇಕು. ಗೆಲುವು ಸಾಧಿಸಿದರೆ ಇನ್ನೂ ಹೆಚ್ಚಿನ ಸಾಧನೆಗೆ ಯೋಚಿಸಬೇಕು ಎಂದರು.

ಸಮಾಜ, ಈ ನಾಡು ಮತ್ತು ರಾಷ್ಟ್ರಕ್ಕೆ ಉತ್ತಮ ಕೊಡುಗೆ ನೀಡಲು ಸದಾ ಯೋಚಿಸಬೇಕು. ಗುಲ್ಬರ್ಗ ವಿಶ್ವವಿದ್ಯಾಲಯದ ಗ್ರಂಥಾಲಯ ರಾಜ್ಯದಲ್ಲಿ ಅತಿ ಹೆಚ್ಚು ಸೌಲಭ್ಯ ಹೊಂದಿದೆ. ನಾನೂ ಕೂಡ ಈ ವಿಶ್ವವಿದ್ಯಾಲಯದ ಹಳೇ ವಿದ್ಯಾರ್ಥಿ ಆಗಿರುವುದರಿಂದ ಈ ಗ್ರಂಥಾಲಯವನ್ನು ಹತ್ತಿರದಿಂದ ಬಲ್ಲೆ. ಗ್ರಂಥಾಲಯ ಸದ್ಬಳಕೆ ಮೂಲಕ ನಾನು ಇಂದು ಉನ್ನತ ಸ್ಥಾನದಲ್ಲಿ ನಿಲ್ಲಲು ಸಾಧ್ಯವಾಗಿದೆ ಎಂದು ಸಮರ್ಥಿಸಿಕೊಂಡರು.

ಕುಲಸಚಿವ ರಮೇಶ್ ಲಂಡನಕರ್, ವಿತ್ತಾಧಿಕಾರಿ ಜಯಾಂಬಿಕಾ, ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ಅಧ್ಯಕ್ಷ ಆನಂದ ಮೈತ್ರಿ ಇತರರಿದ್ದರು. ಮೌಲ್ಯಮಾಪನ ಕುಲಸಚಿವ ಎನ್ ಜಿ.ಕಣ್ಣೂರ ವಂದಿಸಿದರು.

### ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ಗೆ ಯುವಜನೋತ್ಸವ

ಗುಲ್ಬರ್ಗ ವಿಶ್ವವಿದ್ಯಾಲಯವು ಶೈಕ್ಷಣಿಕ ವರ್ಷದ ಯುವಜನೋತ್ಸವ 'ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌'ಗೆ ಸೇರಿಕೊಂಡಿದೆ. ಗುಲ್ಬರ್ಗ ವಿವಿ ರಿಜಿಸ್ಟ್ರಾರ್ ಡಾ.ರಮೇಶ್ ಲಂಡನಕರ್ ನೇತೃತ್ವದಲ್ಲಿ ನಡೆದ ಈ ಯುವಜನೋತ್ಸವ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಯುವಕರು ಹೆಚ್ಚಾಗಿ ಪಾಲ್ಗೊಂಡಿರುವ ಹಿನ್ನೆಲೆ 2025ನೇ ಸಾಲಿನ ಇಂಡಿಯನ್ ಬುಕ್ ಆಫ್ ರೆಕಾರ್ಡ್‌ಗೆ ಸೇರಿದೆ.

ಭಾರತದ ಭವಿಷ್ಯ ವಿದ್ಯಾರ್ಥಿಗಳ ಕೈಯಲ್ಲಿದೆ. ಹೀಗಾಗಿ ಯುವ ಪೀಳಿಗೆ ಭವಿಷ್ಯ ರೂಪಿಸಿಕೊಳ್ಳಲು ಈಗಿನಿಂದಲೇ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅತ್ಯಗತ್ಯ. ವಿದ್ಯಾರ್ಥಿಗಳು ಓದಿನ ಜೊತೆಗೆ ಯುವ ಜನೋತ್ಸವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು.

**-ಡಾ.ಶಶಿಕಾಂತ ಉಡಿಕೇರಿ,** ಕುಲಪತಿ, ಗುಲ್ಬರ್ಗ ವಿಶ್ವವಿದ್ಯಾಲಯ

ದೇಶದ, ಈ ನಾಡಿನ ಜನಸಾಮಾನ್ಯರ ಸೇವೆ ಮಾಡಲು ನಾಗರಿಕ ಸೇವೆ ಅತ್ಯುತ್ತಮ ಆಯ್ಕೆ. ಭವಿಷ್ಯದ ಪೀಳಿಗೆಯಾದ ವಿದ್ಯಾರ್ಥಿಗಳು ಇಂದಿನ ದಿನಗಳಲ್ಲಿ ನಾಗರಿಕ ಸೇವೆ ಸೇರಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಮೂಲಕ ಸಾಧನೆಗೈದು ಸಮಾಜ ಸೇವೆ ಮಾಡುವ ಅವಕಾಶ ಪಡೆದುಕೊಳ್ಳಬೇಕು.

**-ಜಹೀರಾ ನಸೀಮ,** ಪ್ರಾದೇಶಿಕ ಆಯುಕ್ತೆ ಕಲಬುರಗಿ ವಿಭಾಗ

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ
SAMYUKTA KARNATAKA
ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ







ಗುಲ್ಬರ್ಗ ವಿಶ್ವವಿದ್ಯಾಲಯದ ನಡೆದ ಅಂತರ್ ಮಹಾವಿದ್ಯಾಲಯ ಯುವಜನೋತ್ಸವದ ಸ್ಪರ್ಧೆಯಲ್ಲಿ ಶರಣಬಸವೇಶ್ವರ ವಿಜ್ಞಾನ ಕಾಲೇಜು ಸಮಗ್ರ ಪ್ರಶಸ್ತಿ ಪಡೆಯಿತು. ರೇಷ್ಮಿ ಎಜುಕೇಶನಲ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್ ಕಾಲೇಜ್ ರನ್ನರ್ ಅಪ್‌ಗೆ ಭಾಜನವಾಯಿತು.

## ಶರಣಬಸವೇಶ್ವರ ಕಾಲೇಜ್‌ಗೆ ಸಮಗ್ರ ಪ್ರಶಸ್ತಿ | ರೇಷ್ಮಿ ಕಾಲೇಜ್ ರನ್ನರ್ ಆಪ್‌ಗೆ ಭಾಜನ

# ಅಂತರ ಮಹಾವಿದ್ಯಾಲಯಗಳ ಯುವ ಜನೋತ್ಸವಕ್ಕೆ ತೆರೆ

**ಸಂ.ಕ.ಸಮಾಚಾರ ಕಲಬುರಗಿ:** ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳಿಂದ ನಡೆದ 2025-26ನೇ ಸಾಲಿನ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವಕ್ಕೆ ಸೋಮವಾರ ತೆರೆ ಬಿತ್ತು.

ಇಲ್ಲಿನ ಗುಲ್ಬರ್ಗ ವಿಶ್ವವಿದ್ಯಾಲಯದ ಜ್ಞಾನಗಂಗಾ ಆವರಣದಲ್ಲಿ ಮೂರು ದಿನ ನಡೆದ ಅಂತರ್ ಮಹಾವಿದ್ಯಾಲಯ ಯುವಜನೋತ್ಸವದಲ್ಲಿ ಶರಣಬಸವೇಶ್ವರ ವಿಜ್ಞಾನ ಕಾಲೇಜು ಸಮಗ್ರ ಪ್ರಶಸ್ತಿ ಪಡೆದರೆ, ರೇಷ್ಮಿ ಎಜುಕೇಶನಲ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್ ಕಾಲೇಜು ರನ್ನರ್ ಅಪ್‌ಗೆ ಭಾಜನವಾಯಿತು.

ಯುವಜನೋತ್ಸವದಲ್ಲಿ 25ಕ್ಕೂ ಅಧಿಕ ಮಹಾವಿದ್ಯಾಲಯಗಳ ನೂರಾರು ವಿದ್ಯಾರ್ಥಿಗಳು ತಮ್ಮ ಕಲೆ ಪ್ರದರ್ಶಿಸಿದರು. ಶಾಸ್ತ್ರೀಯ ಗಾಯನ, ಲಘು ಸಂಗೀತ, ಪಾಶ್ಚಿಮಾತ್ಯ ಸ್ವರಗಾಯನ, ಪಾಶ್ಚಿಮಾತ್ಯ ಇನ್‌ಸ್ಟ್ರುಮೆಂಟಲ್ ಸೋಲೊ, ಜಾನಪದ ಸಂಗೀತ, ಕ್ಲಾಸಿಕಲ್ ಡ್ಯಾನ್ಸ್, ಸೃಜನಾತ್ಮಕ ನೃತ್ಯ ಸಂಯೋಜನೆ, ವಾಕ್ಚಾತುರ್ಯ ಸ್ಪರ್ಧೆ, ಚರ್ಚಾ ಸ್ಪರ್ಧೆ, ಏಕಾಂತ ನಾಟಕ, ಪ್ರಹಸನ, ಮಿಮಿಕ್ರಿ, ಸ್ಪಾಟ್ ಪೇಂಟಿಂಗ್, ಪೋಸ್ಟರ್ ಮೇಕಿಂಗ್, ರಂಗೋಲಿ ಹೀಗೆ ಅನೇಕ ಸ್ಪರ್ಧೆಯ ವಿಭಾಗದಲ್ಲಿ ಶರಣಬಸವೇಶ್ವರ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ವಿಜೇತರಾಗಿ ಚಾಂಪಿಯನ್ ಪಟ್ಟ ಪಡೆಯಿತು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಶಶಿಕಾಂತ ಉಡಿಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ವರ್ಷದ ಯುವಜನೋತ್ಸವದಲ್ಲಿ 25ಕ್ಕಿಂತ ಹೆಚ್ಚಿನ ಕಾಲೇಜಿನ ಸುಮಾರು 500 ಸ್ಪರ್ಧಿಗಳು ಭಾಗವಹಿಸಿದ್ದು ಇಂಡಿಯಾ ಬುಕ್ ಅಪ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿದೆ. ಕಲ್ಯಾಣ ಕರ್ನಾಟಕ ಭಾಗದ ಕಲೆ ಸಾಹಿತ್ಯ ಮತ್ತು ಐತಿಹಾಸಿಕ ಪರಂಪರೆ ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು.

ಕುಲಸಚಿವ ಪ್ರೊ. ರಮೇಶ್ ಲಂಡನಕರ್ ಯುವಜನೋತ್ಸವ ವರದಿ ಮಂಡಿಸಿದರು. ಗ್ರಂಥಾಲಯದ ಗ್ರಂಥಪಾಲಕ ಡಾ. ಸುರೇಶ್ ಜಂಗೆ ಸ್ವಾಗತಿಸಿ ಯುವಜನೋತ್ಸವ ಇಂಡಿಯನ್ ಬುಕ್ ಅಪ್ ರೆಕಾರ್ಡ್‌ಗೆ ಸೇರಲ್ಪಟ್ಟಿರುವ ಪ್ರತಿ ಮಂಡಿಸಿದರು.

ಕಾರ್ಯಕ್ರಮದಲ್ಲಿ ಮೌಲ್ಯಮಾಪನ ವಿಭಾಗದ ಕುಲಸಚಿವ ಡಾ.ಎನ್.ಜಿ. ಕಣ್ಣೂರು, ವಿತ್ತ ಅಧಿಕಾರಿ ಜಯಾಂಬಿಕಾ, ಸಂಶೋಧನ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಆನಂದ ಮೈತ್ರಿ, ಸಿಂಡಿಕೇಟ್ ಸದಸ್ಯರು, ಎಲ್ಲ ವಿಭಾಗದ ಡೀನರುಗಳು, ಪ್ರಾಧ್ಯಾಪಕರು, ಬೋಧಕ ಮತ್ತು ಬೋಧಕೇತರ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಇದ್ದರು.

### ಉನ್ನತ ಸಾಧನೆಗೆ ತಾಳ್ಮೆ, ಆಸಕ್ತಿ ಅಗತ್ಯ

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗವು ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ಐತಿಹಾಸಿಕ ಪರಂಪರೆ ಹೊಂದಿದೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲತೆಯಿಂದ ಭಾಗವಹಿಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಕಾಲಹರಣ ಮಾಡಬೇಡಿ. ದೇಶಕ್ಕೆ ಮತ್ತು ಸಮಾಜಕ್ಕೆ ಏನಾದರೂ ಕೊಡುಗೆ ನೀಡಲು ನಿರ್ಧರಿಸಿ ದೃಢ ಸಂಕಲ್ಪ ಮಾಡಬೇಕು ಎಂದು ಸಲಹೆ ನೀಡಿದರು. ತಾವು ಕೂಡ ಗುಲ್ಬರ್ಗಾ ವಿಶ್ವ ವಿದ್ಯಾಲಯದಲ್ಲಿ ಓದಿದ್ದೇನೆ ಎಂದು ನೆನಪಿಸಿಕೊಂಡ ಅವರು, ಇಂದು ಕಲಬುರಗಿಯಲ್ಲಿ ಪ್ರಾದೇಶಿಕ ಆಯುಕ್ತರಾಗಿ ಈ ಭಾಗದ ಸಮಗ್ರ ಅಭಿವೃದ್ಧಿಗೆ ಸೇವೆ ಸಲ್ಲಿಸುತ್ತಿದ್ದೇನೆ. ಈ ಭಾಗದ ವಿದ್ಯಾರ್ಥಿಗಳು ಸಿವಿಲ್ ಸರ್ವಿಸ್ ಪರೀಕ್ಷೆಗಳನ್ನು ಬರೆದ ಹೆಚ್ಚಿನ ಸಾಧನೆ ಮಾಡಬೇಕು ಎಂದು ಆಶಿಸಿದರು.

# ಶರಣಬಸವೇಶ್ವರ ವಿಜ್ಞಾನ ಕಾಲೇಜು ಚಾಂಪಿಯನ್

## ಗುಲಬರ್ಗಾ ವಿಶ್ವವಿದ್ಯಾಲಯ ವ್ಯಾಪ್ತಿಯ ಅಂತರ ಮಹಾವಿದ್ಯಾಲಯ ಯುವಜನೋತ್ಸವಕ್ಕೆ ಅದ್ದೂರಿ ತೆರೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮೂರು ದಿನಗಳ ಗುಲಬರ್ಗಾ ವಿ.ವಿ. ವ್ಯಾಪ್ತಿಯ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವದ ಬಹುತೇಕ ಸ್ಪರ್ಧೆಗಳಲ್ಲಿ ಮುನ್ನಡೆ ಸಾಧಿಸಿದ ನಗರದ ಶರಣಬಸವೇಶ್ವರ ವಿಜ್ಞಾನ ಕಾಲೇಜು ಅಂತಿಮವಾಗಿ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಂಡು ಗೆಲುವಿನ ನಗೆ ಬೀರಿತು.

ಗುಲಬರ್ಗಾ ವಿ.ವಿ.ಯ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಸೋಮವಾರ ಸಂಜೆ ನಡೆದ ವರ್ಣರಂಜಿತ ಸಮಾರಂಭದಲ್ಲಿ ಕಲಬುರಗಿ ಪ್ರಾದೇಶಿಕ ಆಯುಕ್ತೆ, ಗುವಿವಿ ಹಳೆಯ ವಿದ್ಯಾರ್ಥಿನಿಯೂ ಆದ ಜಹೀರಾ ನಸೀಮ್ ಅವರು ಸಮಾರೋಪ ಭಾಷಣ ಮಾಡಿ ವಿಜೇತರಿಗೆ ಪದಕ ವಿತರಣೆ ಮಾಡಿದರು.

ನಗರದ ರೇಷ್ಮಿ ಎಜುಕೇಶನ್ ಅಂಡ್ ಚಾರಿಟಬಲ್ ಟ್ರಸ್ಟ್ ಅಧೀನದ ಪದವಿ ಕಾಲೇಜು ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಗುಲಬರ್ಗಾ ವಿ.ವಿ. ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಅನುದಾನಿತ ಹಾಗೂ ಖಾಸಗಿ ಸೇರಿದಂತೆ 25 ಪದವಿ ಕಾಲೇಜುಗಳು ಮೂರು ದಿನಗಳ ಯುವಜನೋತ್ಸವದಲ್ಲಿ ಭಾಗವಹಿಸಿದ್ದವು.

530 ವಿದ್ಯಾರ್ಥಿಗಳು ಸಮೂಹ ನೃತ್ಯ, ಜಾನಪದ ನೃತ್ಯ, ಗಾಯನ, ಏಕಾಂಕ ನಾಟಕ, ಮೈಮ್, ಕ್ಲೇ ಮಾಡೆಲಿಂಗ್, ಶಾಸ್ತ್ರೀಯ ಹಾಗೂ ಪಾಶ್ಚಿಮಾತ್ಯ ಸಂಗೀತ, ವಿವಿಧ ರಾಜ್ಯಗಳ ನೃತ್ಯ ಪ್ರಕಾರ, ಕಾರ್ಟೂನಿಂಗ್, ಕೊಲಾಜ್, ಭಾಷಣ ಸ್ಪರ್ಧೆ, ಚರ್ಚಾ ಸ್ಪರ್ಧೆ, ರಸಪ್ರಶ್ನೆ, ಪ್ರಹಸನ, ಮೂಕಾಭಿನಯ, ಸೃಜನಾತ್ಮಕ ನೃತ್ಯ ಸಂಯೋಜನೆ, ರಂಗೋಲಿ, ಜಾನಪದ ಸಂಗೀತ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚಿದರು.

ಪ್ರಶಸ್ತಿ ಪ್ರದಾನಕ್ಕೂ ಮುನ್ನ ಅತ್ಯುತ್ತಮ ಪ್ರದರ್ಶನ ತೋರಿದ ರೈತರ ಬದುಕು ಬಿಂಬಿಸುವ ನೃತ್ಯ, ಪಂಜಾಬಿ ಶೈಲಿಯ ನೃತ್ಯ, ವಿದ್ಯಾರ್ಥಿನಿ ದೀಪಿಕಾರ ಮಿಮಿಕ್ರಿ ಗಮನ ಸೆಳೆದವು.

ಸಮಾರೋಪ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, 'ಗುಲಬರ್ಗಾ ವಿ.ವಿ.ಯ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅಧ್ಯಯನ ಮಾಡಿದ್ದೇನೆ. ಮತ್ತೊಮ್ಮೆ ಈ ವಿಶ್ವವಿದ್ಯಾಲಯಕ್ಕೆ ಬಂದಿದ್ದರಿಂದ ಹಳೆಯ ದಿನಗಳು ನೆನಪಾಗುತ್ತಿವೆ. ಸ್ಪರ್ಧೆ ಎಂದ ಮೇಲೆ ಸೋಲು ಗೆಲುವು ಸಹಜ. ಸೋಲಿಗೆ ಕಾರಣ ಏನು ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಬೇಕು. ಸೋಲು ಗೆಲುವಿನಾಚೆ ಇಲ್ಲಿ ಒಂದು ತಂಡವನ್ನು ಹೇಗೆ ಕಟ್ಟಬೇಕು ಎಂಬುದನ್ನು ಕಲಿತುಕೊಂಡಿದ್ದೀರಿ' ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಗುಲಬರ್ಗಾ ವಿ.ವಿ. ಕುಲಸಚಿವ ಪ್ರೊ. ರಮೇಶ ಲಂಡನಕರ್, 'ಬಹುಭಾಷಾ ನಟ ಪ್ರಕಾಶ್ ರಾಜ್ ಅವರಿಂದ ಉದ್ಘಾಟನೆಗೊಂಡ ಯುವಜನೋತ್ಸವವು ಮೂರು ದಿನಗಳ ಕಾಲ ಅತ್ಯುತ್ತಮವಾಗಿ ನಡೆದು ಯಶಸ್ವಿಯಾಗಿ ಮುಕ್ತಾಯಗೊಂಡಿದೆ. 500ಕ್ಕೂ ಅಧಿಕ ವಿದ್ಯಾರ್ಥಿಗಳು, 36 ತಂಡಗಳು ಭಾಗವಹಿಸಿದ್ದ ಈ ಯುವಜನೋತ್ಸವವನ್ನು ನಿಭಾಯಿಸಲು ಕುಲಪತಿಗಳ ನೇತೃತ್ವದಲ್ಲಿ ರಚಿಸಿದ್ದ 137 ಸದಸ್ಯರನ್ನೊಳಗೊಂಡ 19 ಉಪಸಮಿತಿಗಳು ಅಹರ್ನಿಶಿ ದುಡಿದಿದ್ದರಿಂದ ಯಶಸ್ಸು ಸಿಕ್ಕಿದೆ' ಎಂದರು.

ಮೌಲ್ಯಮಾಪನ ಕುಲಸಚಿವ ಪ್ರೊ. ಎನ್.ಜಿ.ಕಣ್ಣೂರ, ವಿತ್ತಾಧಿಕಾರಿ ಜಯಾಂಬಿಕ, ಸಂಶೋಧನಾ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಆನಂದ ಮೇತ್ರಿ ವೇದಿಕೆಯಲ್ಲಿದ್ದರು.

> ವಿದ್ಯಾರ್ಥಿಗಳು ಚೆನ್ನಾಗಿ ಅಧ್ಯಯನ ಮಾಡಿ ಸಿವಿಲ್ ಸರ್ವಿಸ್ ಪರೀಕ್ಷೆಗಳನ್ನು ಬರೆದರೆ ಉತ್ತಮ ಅಧಿಕಾರಿಯಾಗಿ ಜನರ ಸೇವೆ ಮಾಡಬಹುದು. ಹಾಗಾಗಿ, ಆ ನಿಟ್ಟಿನಲ್ಲಿ ಯೋಚಿಸಿ ಈಗಿನಿಂದಲೇ ಅಧ್ಯಯನದಲ್ಲಿ ತೊಡಗಿಸಿಕೊಳ್ಳಿ
>
> **ಜಹೀರಾ ನಸೀಮ್**, ಪ್ರಾದೇಶಿಕ ಆಯುಕ್ತೆ

> ಪದವಿ ಕಾಲೇಜುಗಳಿಗೆ ರಜೆ ಇದ್ದರೂ ಹೆಚ್ಚಿನ ವಿದ್ಯಾರ್ಥಿಗಳ ತಂಡಗಳು ಈ ಬಾರಿ ಭಾಗವಹಿಸಿದ್ದವು. ದಕ್ಷಿಣ ವಲಯಕ್ಕೆ ಹೋಗುವ ವಿ.ವಿ.ಗಳೆಲ್ಲ ಇದೇ ಅವಧಿಯಲ್ಲಿ ಯುವಜನೋತ್ಸವ ನಡೆಸಿವೆ
>
> **ಪ್ರೊ.ಶಶಿಕಾಂತ ಉಡಿಕೇರಿ** ಕುಲಪತಿ




ಗುಲಬರ್ಗಾ ವಿವಿ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವದಲ್ಲಿ ಚಾಂಪಿಯನ್ ಪಟ್ಟ ಪಡೆದ ಶರಣಬಸವೇಶ್ವರ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಕುಲಪತಿ ಪ್ರೊ.ಶಶಿಕಾಂತ ಉಡಿಕೇರಿ ಅವರಿಂದ ಟ್ರೋಫಿ ಸ್ವೀಕರಿಸಿ ಸಂಭ್ರಮಿಸಿದರು




ಗುಲಬರ್ಗಾ ವಿಶ್ವವಿದ್ಯಾಲಯದ ಯುವಜನೋತ್ಸವದ ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳು ಪಂಜಾಬಿ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು

### ವಿಜೇತ ಕಾಲೇಜುಗಳ ವಿವರ

**ಸಾಂಸ್ಕೃತಿಕ ಮೆರವಣಿಗೆ:** ಗುಲಬರ್ಗಾ ವಿಶ್ವವಿದ್ಯಾಲಯ ತಂಡ (ಪ್ರಧಾನ ಕ್ಯಾಂಪಸ್) (ಪ್ರಥಮ); ಸೇಡಂನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ದ್ವಿತೀಯ)

**ಸಂಗೀತ ವಿಭಾಗ:** ರೇಷ್ಮಿ ಎಜುಕೇಶನ್ ಅಂಡ್ ಚಾರಿಟಬಲ್ ಟ್ರಸ್ಟ್ (ಪ್ರಥಮ); ಶರಣಬಸವೇಶ್ವರ ವಿಜ್ಞಾನ ಕಾಲೇಜು (ದ್ವಿತೀಯ)

**ನೃತ್ಯ ವಿಭಾಗ:** ಶರಣಬಸವೇಶ್ವರ ವಿಜ್ಞಾನ ಕಾಲೇಜು (ಪ್ರಥಮ); ಸೇಡಂನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ದ್ವಿತೀಯ)

**ಸಾಹಿತ್ಯಿಕ ವಿಭಾಗ:** ಎನ್.ವಿ. ಪದವಿ ಕಾಲೇಜು, ಕಲಬುರಗಿ (ಪ್ರಥಮ); ರೇಷ್ಮಿ ಎಜುಕೇಶನ್ ಅಂಡ್ ಚಾರಿಟಬಲ್ ಟ್ರಸ್ಟ್ (ದ್ವಿತೀಯ)

**ನಾಟಕ ವಿಭಾಗ:** ಶರಣಬಸವೇಶ್ವರ ವಿಜ್ಞಾನ ಕಾಲೇಜು (ಪ್ರಥಮ); ರೇಷ್ಮಿ ಎಜುಕೇಶನ್ ಅಂಡ್ ಚಾರಿಟಬಲ್ ಟ್ರಸ್ಟ್ (ದ್ವಿತೀಯ)

**ಫೈನ್ ಆರ್ಟ್ ವಿಭಾಗ:** ಗುಲಬರ್ಗಾ ವಿಶ್ವವಿದ್ಯಾಲಯ ತಂಡ (ಪ್ರಧಾನ ಕ್ಯಾಂಪಸ್) (ಪ್ರಥಮ); ರೇಷ್ಮಿ ಎಜುಕೇಶನ್ ಅಂಡ್ ಚಾರಿಟಬಲ್ ಟ್ರಸ್ಟ್ (ದ್ವಿತೀಯ)

### ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲು

ಗುಲಬರ್ಗಾ ವಿ.ವಿ.ಯು ಮೂರು ದಿನಗಳ ಕಾಲ ಅಚ್ಚುಕಟ್ಟಾಗಿ ಆಯೋಜಿಸಿದ್ದು ಹಾಗೂ ತಂಡಗಳು ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡಿರುವುದು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ.

ವಿವಿಧ ಸ್ಪರ್ಧೆಗಳನ್ನು ವೀಕ್ಷಿಸಿದ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನ ಅಧಿಕಾರಿಗಳಾದ ಪಾವನಿ ಹಾಗೂ ಮೀನಾಕ್ಷಿ ಪದ್ಮನಾಭನ್ ಅವರು 'ಯೂತ್ ಕಲ್ಚರಲ್ ಎಕ್ಸಲೆನ್ಸ್' ವಿಭಾಗದಲ್ಲಿ ಈ ಯುವಜನೋತ್ಸವವನ್ನು ದಾಖಲಿಸಿಕೊಳ್ಳಲು ಶಿಫಾರಸು ಮಾಡಿದ್ದರು' ಎಂದು ಗುವಿವಿ ಗ್ರಂಥಾಲಯ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ. ಸುರೇಶ ಜಂಗೆ ಕಾರ್ಯಕ್ರಮದಲ್ಲಿ ತಿಳಿಸಿದರು.



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು
ಭಾರತ ಸರ್ಕಾರ

ಕರ್ನಾಟಕ ನವೀಕರಿಸಬಹುದಾ
(ಕರ್ನಾಟಕ ಸರ್ಕಾರದ
ಪ್ರಕ
ಪಿ.ಎಂ. ಕುಸುಮ್-ಬಿ ಯೋಜನೆಯಡಿ ಸೋ
ರೈತರ ಗ

ತಾಂತ್ರಿಕ ಕಾರ್ಯಸಾಧ್ಯತೆ ಹೊಂದಿರುವ ಅರ್ಜಿಗಳ ರೈತರುಗ ಈಗಾಗಲೇ ಮೊಬೈಲ್ ಸಂದೇಶಗಳನ್ನು ರವಾನಿಸಲಾಗಿ ರವಾನಿಸಲಾಗುತ್ತಿದೆ. ಈ ಸಂಬಂಧ ರೈತರು ತಮ್ಮ ಪಾ ವಂತಿಗೆಯನ್ನು ದಿನಾಂಕ: **30.12.2025** ರೊಳಗೆ ಪಾವತಿಸ ಅಂತಿಮ ಗಡುವು ನಿಗಧಿಪಡಿಸಲಾಗಿದೆ. ಸದರಿ ಗಡು ಒಳಗಾಗಿ ಪಾವತಿಸಲು ವಿಫಲವಾದಲ್ಲಿ, ಅಂತಹ ಅರ್ಜಿಗಳ ರದ್ದುಪಡಿಸಲಾಗುವುದು.

ಆನ್‌ಲೈನ್ ಮುಖಾಂತರ ವಂತಿಗೆಯನ್ನು ಪಾವತಿಸ **www.souramitra.com** ನಲ್ಲಿ **"PAY FARM SHARE"**ನ್ನು ಕ್ಲಿಕ್ ಮಾಡಿ ತಮ್ಮ ಅರ್ಜಿ ಸಂಖ್ಯೆ / ಮೊಬೈ ಸಂಖ್ಯೆ ನಮೂದಿಸಿ ಪಾವತಿಸಬಹುದಾಗಿರುತ್ತದೆ. ಹಣಪಾವ ಸಂಬಂಧಿಸಿದಂತೆ ಮಾಹಿತಿಯನ್ನು **KREDL** ನ ಸಹಾಯವ ಸಂಖ್ಯೆ: **080-22202100 & 8095132100** ಮುಖಾಂ ಪಡೆದುಕೊಳ್ಳಲು ಸೂಚಿಸಲಾಗಿದೆ.







Publication Date
23/12/2025

# ಎಸ್‌ಬಿಆರ್ ಸೈನ್ಸ್ ಕಾಲೇಜಿಗೆ ವೀರಾಗ್ರಣಿ

## ಗುವಿವಿ ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವಕ್ಕೆ ತೆರೆ ■ ರೇಷ್ಮಿ ಕಾಲೇಜು ರನ್ನರ್ ಅಪ್

## ಸ್ಪರ್ಧೆಗಳಲ್ಲಿ ಗುವಿವಿ ವಿದ್ಯಾರ್ಥಿಗಳ ಮೇಲುಗೈ ■ 25ಕ್ಕಿಂತ ಹೆಚ್ಚು ಕಾಲೇಜಿನ 500 ಸ್ಪರ್ಧಿಗಳು ಭಾಗಿ




ಕಲಬುರಗಿ: ಗುಲ್ಬರ್ಗ ವಿವಿ ಯುವಜನೋತ್ಸವದಲ್ಲಿ ಸಮಗ್ರ ವೀರಾಗ್ರಣಿ ಪ್ರಶಸ್ತಿಗೆ ಭಾಜನರಾದ ಶರಣಬಸವೇಶ್ವರ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳಿಗೆ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಟ್ರೋಫಿ ವಿತರಿಸಿದರು.




ಕಲಬುರಗಿ: ರನ್ನರ್ ಅಪ್ ಪ್ರಶಸ್ತಿಗೆ ಭಾಜನರಾದ ರೇಷ್ಮಿ ಶಿಕ್ಷಣ ಸಂಸ್ಥೆಯ ಕಾಲೇಜು ವಿದ್ಯಾರ್ಥಿಗಳಿಗೆ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಟ್ರೋಫಿ ವಿತರಿಸಿದರು.

■ ಉದಯವಾಣಿ ಸಮಾಚಾರ

**ಕಲಬುರಗಿ:** ಇಲ್ಲಿನ ಗುಲ್ಬರ್ಗ ವಿವಿಯಲ್ಲಿ ಕಳೆದ ಮೂರು ದಿನಗಳಿಂದ ನಡೆದ ಅಂತರ್‌ಕಾಲೇಜುಗಳ ಯುವ ಜನೋತ್ಸವದಲ್ಲಿ ಕಲಬುರಗಿ ನಗರದ ಶರಣಬಸವೇಶ್ವರ ವಿಜ್ಞಾನ ಕಾಲೇಜು 88 ಅಂಕ ಪಡೆಯುವ ಮೂಲಕ ಸಮಗ್ರ ವೀರಾಗ್ರಣಿ ಪ್ರಶಸ್ತಿಗೆ ಭಾಜನವಾದರೆ, ರೇಷ್ಮಿ ಶಿಕ್ಷಣ ಸಂಸ್ಥೆಯ ಕಾಲೇಜು 74 ಅಂಕ ಪಡೆದು ರನ್ನರ್‌ಅಪ್ ಆಗಿ ಹೊರಹೊಮ್ಮಿತು.

ಎಲ್ಲ ವಿಭಾಗಗಳಲ್ಲಿ ಶರಣಬಸವೇಶ್ವರ ವಿಜ್ಞಾನ ಕಾಲೇಜು ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯ ಪ್ರಕಟಿಸಿದರು. ಕಾವೇನು ಕಮ್ಮಿ ಇಲ್ಲದಂತೆ ರೇಷ್ಮಿ ಕಾಲೇಜು ಆ್ಯಂಡ್ ಚಾರಿಟೇಬಲ್ ಟ್ರಸ್ಟ್‌ನ ವಿದ್ಯಾರ್ಥಿಗಳು ಕೂಡ ಸೆಣಸಿದರು. ಅಲ್ಲದೇ, ಗುವಿವಿ ವಿದ್ಯಾರ್ಥಿಗಳು ಕೂಡ ಹಲವು ಸ್ಪರ್ಧೆಗಳಲ್ಲಿ ಮೇಲುಗೈ ಸಾಧಿಸಿದ್ದು ಯುವಜನೋತ್ಸವದ ಹೈಲೈಟ್.

**ಯುವ ಜನತೆ ತಾಳ್ಮೆ ಕಲಿಯಲಿ:** ಇಂದಿನ ಯುವ ಜನತೆಗೆ ತಾಳ್ಮೆ ಕಡಿಮೆ. ಅದರಿಂದಾಗಿ ಅವರು ಬದುಕು ಕೆಲವು ಬಾರಿ ಅರಳುವ ಮುನ್ನವೇ ಕಮರುವಂತಹ ಪರಿಸ್ಥಿತಿಗೆ ದೂಡಲ್ಪಡುತ್ತಿದ್ದಾರೆ. ಪ್ರಸ್ತುತವಾಗಿ ಸಮಾಜ ಹಾಗೂ ದೇಶದಲ್ಲೂ ಬರೀ ತೋರಿಕೆಯ ಕ್ರಿಯಾಶೀಲತೆ ಕಂಡು ಬರುತ್ತಿದೆ. ಅದಕ್ಕೆ ಯುವಕರು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು ಎಂದು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಕಿವಿ ಮಾತು ಹೇಳಿದರು.

ನಗರದ ಗುಲ್ಬರ್ಗ ವಿವಿಯಲ್ಲಿ ನಡೆದ ಮೂರು ದಿನಗಳ ಯುವಜನೋತ್ಸವ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಶರಣಬಸವೇಶ್ವರ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳಿಗೆ ಸಮಗ್ರ ವೀರಾಗ್ರಣಿ ಮತ್ತು ರೇಷ್ಮಿ ಕಾಲೇಜಿನ ವಿದ್ಯಾರ್ಥಿಗಳಿಗೆ ರನ್ನರ್‌ಅಪ್ ಪಾರಿತೋಷಕ ವಿತರಿಸಿ ಅವರು ಮಾತನಾಡಿದರು.

> ಈ ಬಾರಿ ಯುವಜನೋತ್ಸವ ಅತ್ಯಂತ ಯಶಸ್ವಿ ಹಾಗೂ ಎಲ್ಲರೂ ಸೇರಿಕೊಂಡು ನಡೆಸಿಕೊಟ್ಟಿರುವುದು ವಿವಿ ದಾಖಲೆಗಳಲ್ಲಿ ಉಳಿಯಿತು. ನೂತನ ಕುಲಪತಿ ಪ್ರೊ| ಶಶಿಕಾಂತ ಉಡಿಕೇರಿ ಹಾಗೂ ಎಲ್ಲ ನಿಕಾಯದ ಡೀನ್ ಗಳು, ಎಲ್ಲ ವಿಭಾಗದ ಸಿಬ್ಬಂದಿಗಳ ಸಹಕಾರ ಮರೆಯುವಂತಿಲ್ಲ. ಗುವಿವಿ ವಿದ್ಯಾರ್ಥಿಗಳು ಸಾಮರ್ಥ್ಯಕ್ಕೆ ತಕ್ಕ ಪ್ರದರ್ಶನ ನೀಡಿದ್ದಾರೆ. ಅಲ್ಲದೇ ಬುಕ್ ಆಫ್ ರೆಕಾರ್ಡ್ ಮಾಡಿರುವುದು ಕೂಡ ಹೆಮ್ಮೆಯ ಸಂಗತಿ.
>
> ● **ಪ್ರೊ| ರಮೇಶ ಲಂಡನಕರ್,**
> ಕುಲಸಚಿವರು, ಗುವಿವಿ

ಕಲ್ಯಾಣ ಕರ್ನಾಟಕ ಭಾಗವು ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ಐತಿಹಾಸಿಕ ಪರಂಪರೆ ಹೊಂದಿದೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲತೆಯಿಂದ ಭಾಗವಹಿಸಬೇಕು. ಯಾವುದೇ ಸ್ಪರ್ಧೆಯಲ್ಲಿ ಪ್ರತಿಯೊಬ್ಬ ಸ್ಪರ್ಧಿಯೂ ತಾಳ್ಮೆಯಿಂದ ಪಾಲ್ಗೊಳ್ಳಬೇಕು. ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಉನ್ನತ ಮಟ್ಟದ ಸಾಧನೆ ಮಾಡಲು ಸಹನೆ, ತಾಳ್ಮೆ ಅತೀವ ಅಸಕ್ತಿ ಅಗತ್ಯವಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕಾಲಹರಣ ಮಾಡಬೇಡಿ. ದೇಶ ಮತ್ತು ಸಮಾಜಕ್ಕೆ ಏನಾದರೂ ಕೊಡುಗೆ ನೀಡಲು ನಿರ್ಧರಿಸಿ ದೃಢ ಸಂಕಲ್ಪ ಮಾಡಬೇಕು ಎಂದು ಸಲಹೆ ನೀಡಿದರು.

ತಾವು ಕೂಡ ಗುಲ್ಬರ್ಗಾ ವಿಶ್ವ ವಿದ್ಯಾಲಯದಲ್ಲಿ ಓದಿದ್ದೇನೆ ಎಂದು ನೆನಪಿಸಿಕೊಂಡ ಅವರು, ಇಂದು ಕಲಬುರಗಿಯಲ್ಲಿ ಪ್ರಾದೇಶಿಕ ಆಯುಕ್ತರಾಗಿ ಈ ಭಾಗದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಈ ಭಾಗದ ವಿದ್ಯಾರ್ಥಿಗಳು ಕೂಡ ಸಿವಿಲ್ ಸರ್ವಿಸ್ ಪರೀಕ್ಷೆಗಳನ್ನು ಬರೆದು ಹೆಚ್ಚಿನ ಸಾಧನೆ ಮಾಡಬೇಕು ಎಂದು ಆಶಿಸಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ| ಶಶಿಕಾಂತ ಉಡಿಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ವರ್ಷದ ಯುವಜನೋತ್ಸವದಲ್ಲಿ 25ಕ್ಕಿಂತ ಹೆಚ್ಚಿನ ಕಾಲೇಜಿನ ಸುಮಾರು 500 ಸ್ಪರ್ಧಿಗಳು ಭಾಗವಹಿಸಿದ್ದಾರೆ. ತಮ್ಮೆಲ್ಲರ ಸಹಕಾರದಿಂದ ಗುಲಬರ್ಗಾ ವಿಶ್ವವಿದ್ಯಾಲಯ ಯುವಜನೋತ್ಸವ ಇಂಡಿಯಾ ಬುಕ್ ಆಫ್ ರೆಕಾರ್ಡ್ ನಲ್ಲಿ ದಾಖಲೆ ಮಾಡಿದೆ. ಕಲ್ಯಾಣ ಕರ್ನಾಟಕ ಭಾಗದ ಕಲೆ ಸಾಹಿತ್ಯ ಮತ್ತು ಐತಿಹಾಸಿಕ ಪರಂಪರೆ ಉಳಿಸಿ-ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು.

ಕುಲಸಚಿವ ಪ್ರೊ| ರಮೇಶ್ ಲಂಡನಕರ್ ಯುವಜನೋತ್ಸವ ವರದಿ ಮಂಡಿಸಿದರು. ಗ್ರಂಥಾಲಯದ ಗ್ರಂಥಪಾಲಕ ಡಾ| ಸುರೇಶ್ ಜಂಗೆ ಅತಿಥಿಗಳನ್ನು ಸ್ವಾಗತಿಸಿದರು. ಜೊತೆಗೆ ಗುಲಬರ್ಗಾ ವಿಶ್ವವಿದ್ಯಾಲಯ 2025-26ನೇ ಸಾಲಿನ ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವ ಇಂಡಿಯನ್ ಬುಕ್ ಆಫ್ ರೆಕಾರ್ಡ್‌ಗೆ ಸೇರಲ್ಪಟ್ಟಿರುವ ಪ್ರತಿ ಮಂಡಿಸಿದರು.

ಸಂಗೀತ ವಿಭಾಗದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ನಾಡಗೀತೆ ಹಾಗೂ ವಿಶ್ವವಿದ್ಯಾಲಯ ಗೀತೆ ಪ್ರಸ್ತುತಪಡಿಸಿದರು.

## ಗುವಿವಿಗೆ 'ಯುವ ಸಾಂಸ್ಕೃತಿಕ ಶ್ರೇಷ್ಠತೆ ಪ್ರಶಸ್ತಿ'

■ ಉದಯವಾಣಿ ಸಮಾಚಾರ

**ಕಲಬುರಗಿ:** ಗುಲಬರ್ಗಾ ವಿಶ್ವವಿದ್ಯಾಲಯ ಆಯೋಜಿಸಿದ್ದ 2025-26ನೇ ಶೈಕ್ಷಣಿಕ ಸಾಲಿನ ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವವು ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಗೆ ಸೇರುವ ಮೂಲಕ ಮತ್ತೊಂದು ಇತಿಹಾಸ ನಿರ್ಮಿಸಿದೆ.



■ **ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಗೆ ಸೇರ್ಪಡೆಗೊಂಡ ರಾಜ್ಯದ ಏಕೈಕ ವಿಶ್ವವಿದ್ಯಾಲಯ**

ಗುಲಬರ್ಗಾ ವಿಶ್ವವಿದ್ಯಾಲಯವು ಆಯೋಜಿಸಿರುವ 2025-26ರ ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವ ಸ್ಪರ್ಧೆಗೆ ಆಗಮಿಸಿದ್ದ ತೀರ್ಪುಗಾರರು ಮೂರು ದಿನಗಳ ಕಾರ್ಯಕ್ರಮ ವೀಕ್ಷಿಸಿ, ವಿದ್ಯಾರ್ಥಿಗಳ ಸಾಂಸ್ಕೃತಿಕ ಚಟುವಟಿಕೆ, ಭಾಗವಹಿಸುವಿಕೆ, ಪ್ರತಿಭೆ ಪ್ರದರ್ಶನ ಕಂಡು ಪ್ರಶಂಸಿಸಿ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಹೆಸರು ದಾಖಲಿಸಿದ್ದಾರೆ.

ಈ ಯುವಜನೋತ್ಸವ ರಾಷ್ಟ್ರೀಯ ಮಹತ್ವದ ಹೆಗ್ಗುರುತು ಮತ್ತು ಸಾಂಸ್ಕೃತಿಕ ಕಾರ್ಯಕ್ರಮವೆಂದು ಪರಿಗಣಿಸಿ ಅಧಿಕೃತವಾಗಿ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಎಂಬ ಸಂಸ್ಥೆ ಹೆಮ್ಮೆಯಿಂದ ಪ್ರಮಾಣಪತ್ರ ನೀಡಿದೆ. ಕರ್ನಾಟಕದಲ್ಲಿ ಈ ದಾಖಲೆಯನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವ ಹಾಗೂ ವಿದ್ಯಾರ್ಥಿ ಕಲ್ಯಾಣಾಧಿಕಾರಿ ಪ್ರೊ| ರಮೇಶ ಲಂಡನಕರ ನೇತೃತ್ವದಲ್ಲಿ, ಯುವ ಸಮೂಹ ಆಧಾರಿತ ಪ್ರಮಾಣ, ಸಾಂಸ್ಕೃತಿಕ ವೈವಿಧ್ಯತೆ ಮತ್ತು ಯುವ ಭಾಗವಹಿಸುವಿಕೆಗಾಗಿ ಈ ಕಾರ್ಯಕ್ರಮವನ್ನು ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್-2025ರಲ್ಲಿ ಈ ಮೂಲಕ ಘೋಷಿಸಲಾಗಿದೆ ಮತ್ತು ದಾಖಲಿಸಲಾಗಿದೆ ಎಂದು ಇಂಡಿಯನ್ ಬುಕ್ ರೆಕಾರ್ಡ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಡಾ| ವಿವೇಕಾನಂದ ಬಾಬು ಘೋಷಿಸಿದ್ದಾರೆ. ರಾಷ್ಟ್ರೀಯ ವೇದಿಕೆಯಲ್ಲಿ ಯುವಜನರ ಚೈತನ್ಯ, ಸಾಂಸ್ಕೃತಿಕ ಏಕತೆ ಮತ್ತು ಸಾಂಸ್ಥಿಕ ಶ್ರೇಷ್ಠತೆ ಆಚರಿಸಲು ಗುಲಬರ್ಗಾ ವಿಶ್ವವಿದ್ಯಾಲಯ ಕರ್ನಾಟಕ ರಾಜ್ಯದಲ್ಲಿಯೇ ಏಕೈಕ ವಿಶ್ವವಿದ್ಯಾಲಯವಾಗಿದೆ ಎಂದು ಡಾ| ಪಾವನ ಮತ್ತು ಡಾ| ಮೀನಾಕ್ಷಿ ಪದ್ಮನಾಭನ್ ದೃಢೀಕರಿಸಿದ್ದಾರೆ.